ಲೋಕಾಯುಕ್ತ ಹಾಗೂ ಉಪ-ಲೋಕಾಯುಕ್ತರ ಖರ್ಚು

೯೮೦. ಶ್ರೀ ಕೆ. ಬಿ. ಕೋಳಿವಾಡ (ರಾಣೆ ಬೆನ್ನೂರು) — ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಲೋಕಾಯುಕ್ತ ಹಾಗೂ ಉಪ-ಲೋಕಾಯುಕ್ತ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಆದ ವೆಚ್ಚವೆಷ್ಟು ?

ಆ) ಎಷ್ಟು ಪ್ರಕರಣಗಳು ಇದುವರೆವಿಗೂ ವಿಲೇವಾರಿಯಾಗಿದೆ ಮತ್ತು ಎಷ್ಟು ನಿರ್ಣಯವಾಗದೆ ಬಾಕಿ ಉಳಿದಿದೆ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು)—

ಅ) ರೂ. ೨,೩೧,೬೨,೧೩೧-೩೩
(ದಿನಾಂಕ ೧೫-೧-೧೯೮೬ ರಿಂದ ೩೧-೧೨-೧೯೮೭ರ ವರೆಗೆ ಸಿಬ್ಬಂದಿ ವೆಚ್ಚ ಸೇರಿದಂತೆ)

ಆ) ೧) ೭೭ ಪ್ರಕರಣಗಳು ವಿಲೇವಾರಿಯಾಗಿದೆ,

೨) ೧೦೪ ಪ್ರಕರಣಗಳು ತನಿಖೆಯಲ್ಲಿವೆ.

ಬೈಂದೂರಿನಿಂದ ಬೆಂಗಳೂರಿಗೆ ಸುವಿಹಾರಿ ಬಸ್ ವಿಶೇಷ ಏರ್ಪಾಡು ಮಾಡುವುದು

೨೨೭. ಶ್ರೀ ಜಿ. ಎಸ್. ಆಚಾರ್ (ಬೈಂದೂರು)—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೈಂದೂರಿನಿಂದ ಬೆಂಗಳೂರಿಗೆ ಕುಂದಾಪುರ-ಶಿವಮೊಗ್ಗ ಮಾರ್ಗವಾಗಿ 'ಸುವಿಹಾರಿ' ಬಸ್ ವ್ಯವಸ್ಥೆ ವಿಶೇಷವಾಗಿ ಏರ್ಪಡಿಸಲು ಸಾರ್ವಜನಿಕರ ಬೇಡಿಕೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ವ್ಯವಸ್ಥೆಯನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು)—

ಅ) ಮತ್ತು ಆ) ಕ.ರಾ.ರ.ಸಾ.ಸಂಸ್ಥೆಯು ಮಂಗಳೂರಿನ ಮೂಲಕ ಬೆಂಗಳೂರು ಕುಂದಾಪುರಗಳ ನಡುವೆ ಓಡಿಸುತ್ತಿರುವ ಸುವಿಹಾರಿ ಸಾರಿಗೆಯು ಜನಪ್ರಿಯವಾಗಿದೆ. ಹಾಲಾಡಿ ಅಥವಾ ಹುಲಿಕಲ್ಲಿನಿಂದ ಸುವಿಹಾರಿ ಬಸ್ಸಿನಲ್ಲಿ ಪ್ರಯಾಣ ಮಾಡ ಬಯಸುವ ಪ್ರಯಾಣಿಕರು ಈ ಕುಂದಾಪುರ ಬೆಂಗಳೂರು ಬಸ್ಸಿನ ಸೌಲಭ್ಯವನ್ನು ಪಡೆಯಬಹುದು. ಹೊಸನಗರದ ಮೂಲಕವಾಗಿ ಬೆಂಗಳೂರು ಕುಂದಾಪುರಗಳ ನಡುವೆ ಅರೆ-ಸುಖಾಸೀನ ವಾಹನವನ್ನು ಓಡಿಸಲಾಗುತ್ತಿದ್ದು ಇದನ್ನೂ ಸಹ ಉಪಯೋಗಿಸಿಕೊಳ್ಳಬಹುದು.

ಮದ್ಯದಂಗಡಿ ಬಾರ್ ಮತ್ತು ರೆಸ್ಟೋರೆಂಟ್‌ಗಳ ಬಗ್ಗೆ

೧೦೧೧. ಶ್ರೀ ಬಿ. ಗುರುಪ್ರಸಾದ್ (ನೆಲಮಂಗಲ)—ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ೩ ವರ್ಷಗಳಲ್ಲಿ ಅಬಕಾರಿ ಇಲಾಖಾ ಮತಿಯಿಂದ ಮಂಜೂರಾದ ಮದ್ಯದಂಗಡಿ ಬಾರ್ ಮತ್ತು ರೆಸ್ಟೋರೆಂಟ್‌ಗಳ ಸಂಖ್ಯೆ ಎಷ್ಟು ?

ಆ) ಮದ್ಯದಂಗಡಿ, ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ಪ್ರಾರಂಭಿಸಲು ಅನುಸರಿಸಬೇಕಾದ ನೀತಿ ನಿಯಮಗಳೇನು ಹಾಗೂ ಯಾವ ಆಧಾರದ ಮೇಲೆ ಇದುವರೆಗೆ ಮಂಜೂರು ಮಾಡಲಾಗಿದೆ ?

ಇ) ಅಬಕಾರಿ ಸುಂಕವನ್ನು ವಸೂಲಿ ಮಾಡಲು ಅಬಕಾರಿ ನಿರೀಕ್ಷಕರುಗಳಿಗೆ ನಿರ್ದಿಷ್ಟ ಗುರಿಯೇನಾದರೂ ನಿಗದಿಗೊಳಿಸಲಾಗಿದೆಯೇ